**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1484/2024**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಲೊಕೇಶ ಬೆಂಡಿಕಾಯಿ |
| ತಂದೆಃ ಹೆಸರು | ಅಲಪ್ಪ |
| ಉದ್ಯೋಗ | ಸಿ ಹೆಚ್ ಸಿ 771 |
| ವಯಸ್ಸು | 41 ವರ್ಷ |
| ವಾಸಸ್ಥಳ | ಕಲಘಟಗಿ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ದಿಃ 23.12.2023 ರಂದು ರಾತ್ರಿ 9.00 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ನನ್ನ ಪಿ ಐ ಸಾಹೇಬರು ಫೋನ್ ಕರೆ ಮಾಡಿ ಸಂಗಟಿಕೊಪ್ಪ ಬಸ್ ನಿಲ್ದಾಣದ ಹತ್ತಿರ ಯಾರೊಬ್ಬ ವ್ಯಕ್ತಿಯು ಅಕ್ರಮ ಸಾರಾಯಿ ಮಾರಾಟ ಮಾಡುತ್ತಿರುವ ತನಗೆ ಮಾಹಿತಿ ಬಂದಿದ್ದು ನೀವು ಸಿಬ್ಬಂದಿಗಳನ್ನು ಕರೆದುಕೊಂಡು ಹೋಗಿ ದಾಳಿ ಮಾಡಿ ಎಂದು ನಿರ್ದೇಶನ ನೀಡಿದರು. ಅದರಂತೆ ನಾನು ಠಾಣೆಯಲ್ಲಿದ್ದ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರಿಗೆ ಸದರಿ ಮಾಹಿತಿಯನ್ನು ತಿಳಿಸಿ ಚಾಸಾ-5 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದೆ. ಅದರಂತೆ ಸದರಿಯವರು ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ನನ್ನ ಮುಂದೆ ಹಾಜರುಪಡಿಸಿದರು. ಅಕ್ರಮ ಸಾರಾಯಿ ಮಾರಾಟ ಮಾಡುತ್ತಿದ್ದು ಅದನ್ನು ದಾಳಿ ಮಾಡುವ ಕಾಲಕ್ಕೆ ಪಂಚರಾಗಿ ಸಹಕರಿಸಿ ಪಂಚನಾಮೆಯನ್ನು ಬರೆದುಕೊಡಲು

ಕೇಳಿಕೊಂಡ ಮೇರೆಗೆ ಸದರಿಯವರು ಒಪ್ಪಿರುತ್ತಾರೆ. ಅದೇ ದಿನ ರಾತ್ರಿ 9.20 ಗಂಟೆ ಸುಮಾರಿಗೆ ನಾವು ಮತ್ತು ಪಂಚರು ಸೇರಿ ಅವರವರ ದ್ವಿಚಕ್ರ ವಾಹನಗಳ ಮೇಲೆ ಬಾತ್ಮಿ ಬಂದ ಸ್ಥಳಕ್ಕೆ ಹೋದೆವು. ಸದರಿ ಸ್ಥಳದಿಂದ ಸ್ವಲ್ಪ ದೂರದಲ್ಲಿ  ಮರೆಯಾಗಿ ನಿಂತು ವಾಚ್ ಮಾಡಿ ನೋಡಲಾಗಿ ನಮ್ಮ ಪಿ ಐ ಸಾಹೇಬರು ಹೇಳಿದ ಹಾಗೇ ಒಬ್ಬ ವ್ಯಕ್ತಿಯು ಓಮಿನಿ ಕಾರ್ ಸದರಿ ಸ್ಥಳದಲ್ಲಿ ನಿಂತಿದ್ದು ಅದರ ಡೋರ್ ತೆರೆದಿದ್ದು ಸದರಿ ಕಾರ್ ಹತ್ತಿರ ಇಬ್ಬರು ವ್ಯಕ್ತಿಗಳು ಬಂದು ನಿಂತಾಗ ಅಲ್ಲಿ ಇದ್ದ ಒಬ್ಬ ವ್ಯಕ್ತಿಯು ಕಾರ್ ಹೊರಗಿದ್ದ ಚೀಲದಿಂದ ಯಾವುದೋ ಒಂದು ವಸ್ತುವನ್ನು ತೆಗೆದು ಕೊಡುತ್ತಿದ್ದ. ನನಗೆ ಸಮಂಸಯ ಬಂದು ಹತ್ತಿರ ಹೋಗಿ ನೋಡಲಾಗಿ ಅಲ್ಲಿದ್ದ ಸದರಿ ಇಬ್ಬರು ವ್ಯಕ್ತಿಗಳು ತನ್ನ ಕೈಯಲ್ಲಿದ್ದ ವಸ್ತುಗಳನ್ನು ಸ್ದಳದಲ್ಲಿಯೇ ಎಸೆದು ಓಡಿ ಹೋದರು. ನಾನು ಮತ್ತು ಚಾಸಾ-4 ಮತ್ತು 5 ಸೇರಿ ಸದರಿ ಕಾರ್ ಹತ್ತಿರ ನಿಂತಿದ್ದ ವ್ಯಕ್ತಿಯನ್ನು ಹಿಡಿದು ಅವನ ಹೆಸರನ್ನು ಕೇಳಲಾಗಿ ಸದರಿ ವ್ಯಕ್ತಿಯು ತನ್ನ ಹೆಸರು ವಿನಾಯಕ ಮಂಜುನಾಥ ನಾಯ್ಕ ಎಂದು ಹೇಳಿದನು. ಸದರಿ ಇಬ್ಬರು ವ್ಯಕ್ತಿಗಳು ನೆಲಕ್ಕೆ ಎಸೆದ ವಸ್ತುಗಳನ್ನು ತೆಗೆದು ನೋಡಲಾಗಿ ಅವು 90 ಎಮ್ ಎಲ್ ಓರಿಜಿನಲ್ ಚಾಯ್ಸ ವಿಸ್ಕಿ ಟೆಟ್ರಾ ಪಾಕೇಟಗಳು ಇದ್ದವು.

ನಂತರ ನಾನು ಚೀಲದಲ್ಲಿದ್ದ ಎಲ್ಲಾ ವಸ್ತುಗಳನ್ನು ನೆಲಕ್ಕೆ ಚೆಲ್ಲಿ ನೋಡಿದಾಗ ಅದರಲ್ಲಿ 90 ಎಮ್ ಎಲ್ ಓರಿಜಿನಲ್ ಚಾಯ್ಸ ವಿಸ್ಕಿಯ 94 ಟೆಟ್ರಾ ಪಾಕೇಟಗಳು ಇದ್ದವು. ನಂತರ ನಾನು ಸದರಿ ಕಾರ್ ನ ಒಳಗೆ ಹೋಗಿ ನೋಡಿದಾಗ ಅದರಲ್ಲಿ 5 ರಟ್ಟಿನ ಪೆಟ್ಟಿಗೆ ಗಳು ಇದ್ದವು. ಸದರಿ ರಟ್ಟಿನ ಪೆಟ್ಟಿಗೆಗಳನ್ನು ತೆಗೆದು ನೋಡಲಾಗಿ ಪ್ರತಿ ರಟ್ಟಿನ ಪೆಟ್ಟಿಗೆಯಲಲ್ಲಿ 90 ಎಮ್ ಎಲ್ ಓರಿಜಿನಲ್ ಚಾಯ್ಸ ವಿಸ್ಕಿ 96 ಟೆಟ್ರಾ ಪಾಕೇಟಗಳು ಇದ್ದವು. ಸದರಿ 5 ರಟ್ಟಿನ ಪೆಟ್ಟಿಗೆಗಳನ್ನು  ಹೊರತುಪಡಿಸಿ ಇನ್ನು ಎರಡು ರಟ್ಟಿನ ಪೆಟ್ಟಿಗೆಗಳು ಇದ್ದವು. ಅದನ್ನು ತೆಗೆದು ನೋಡಲಾಗಿ ಪ್ರತಿ ಪೆಟ್ಟಿಗೆಗಳಲ್ಲಿ 650 ಎಮ್ ಎಲ್ ನ ಕಿಂಗ್ ಪೀಶರ್ ಪ್ರಿಮಿಯಮ್ ಬಿರ್ ನ 12 ಬಾಟಲ್ ಗಳು ಇದ್ದವು.

ಸದರಿ ವ್ಯಕ್ತಿಯನ್ನು ಈ ಮೇಲ್ಕಂಡ ಮದ್ಯದ ವಸ್ತುಗಳನ್ನು ಎಲ್ಲಿಂದ ತಂದಿದ್ದು ಹಾಗೇ ಅವುಗಳನ್ನು ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಿದಾಗ ವ್ಯಕ್ತಿಯು ಯಲ್ಲಾಪುರದ ಅಮೃತ ವೈನ್ ಶಾಪ್ ನಿಂದ ತಂದಿದ್ದು ಅವುಗಳನ್ನು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದನು. ದೊರೆತ ಎಲ್ಲಾ ಮಾಲುಗಳನ್ನು ಒಂದು ಚೀಲದಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಅರಗಿನಿಂದ

ಶೀಲು ಮಾಡಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ, ಆರೋಪಿ ಮತ್ತು ಮುದ್ದೆಮಾಲನ್ನು ನನ್ನ ತಾಬಾಕ್ಕೆ ತೆಗೆದುಕೊಂಡು ಬೀದಿ ದೀಪ ಮತ್ತು ಓಮಿನಿ ಕಾರ್ ನ ಬೆಳಕಿನಿಂದ ರಾತ್ರಿ 10.05 ರಿಂದ 11.05 ರವರೆಗೆ ಪಂಚನಾಮೆಯನ್ನು ಮಾಡಿ ಮುಗಿಸಲಾಯಿತು. ನಂತರ ಆರೋಪಿ ಮತ್ತು ಮುದ್ದೆಮಾಲು ಸಹಿತ ಠಾಣೆಗೆ ಬಂದು ಚಾಸಾ-12 ರವರಿಗೆ ದೂರನ್ನು ನೀಡಿದೆ.

ಸದರಿ ಓಮಿನಿ ಕಾರ್ ನ ಸಂಖ್ಯೆ ಕೆ ಎ 02 ಎ ಎಫ್ 0368 ಇರುತ್ತದೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದು ಆರೋಪಿಯ ಹೆಸರು ವಿನಾಯಕ ಮಂಜುನಾಥ ನಾಯ್ಕ ಎಂದು ತಿಳಿಸಿದರು.

**ಪಾಟೀ ಸವಾಲುಃ ಅಪಾದಿತರ ಪರ ಶ್ರೀ ಎಸ್ ಟಿ ಟಿ ವಕೀಲರಿಂದ**

ಸಂಗಟಿಕೊಪ್ಪ ಗ್ರಾಮವು ಯಲ್ಲಾಪುರ ಗಡಿ ಪ್ರದೇಶದಲ್ಲಿರುವ ಸ್ಥಳ ಎಂದರೆ ಸರಿ. ಠಾಣಾ ಅಂಕೆ ಸಂಖ್ಯೆಯ ಸಲುವಾಗಿ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕಲಘಟಗಿಯಿಂದ ಸಂಗಟಿಕೊಪ್ಪ ಗ್ರಾಮಕ್ಕೆ ತಲುಪಲು 25 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸಾಕ್ಷಿಯು 20 ಕಿ.ಮೀ ಅಂತರದಲ್ಲಿ ಇದೆ ಎಂದು ನುಡಿಯುತ್ತಾರೆ. ಬಾತ್ಮಿ ಬಂದ ಸಮಯದಿಂದ ದಾಳಿ ಮಾಡಲು ಕಾರ್ಯಕ್ರಮಕ್ಕೆ ತೆಗೆದುಕೊಂಡ ಸಮಯ ಎಷ್ಟು ಎಂದರೆ ಸಾಕ್ಷಿಯು 20 ನಿಮಿಷ ತೆಗೆದುಕೊಂಡಿರುವುದಾಗಿ ನುಡಿಯುತ್ತಾರೆ. ಪೊಲೀಸ ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗಲು 1.30 ಗಂಟೆ ತೆಗೆದುಕೊಳ್ಳಲಾಗುವುದು ಎಂದರೆ

ಸಾಕ್ಷಿಯು 30 ನಿಮಿಷ ತೆಗೆದುಕೊಳ್ಳಲಾಯಿತು ಎಂದು ನುಡಿಯುತ್ತಾರೆ. ದಾಳಿ ಮಾಡುವ ವೇಳೆ ಕತ್ತಲು ಆಗಿತ್ತು ಎಂದರೆ ಸರಿ. ಸದರಿ ಸ್ಥಳದಲ್ಲಿ ಯಾವುದೇ ಬಸ್ ನಿಲ್ದಾಣ ಇಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಿಂದ ಸುಮಾರು 40-50 ಅಡಿ ಅಂತರದಲ್ಲಿ ಮರೆಯಾಗಿ ನಿಂತಿದ್ದೆ ಎಂದರೆ ಸರಿ. ಕತ್ತಲು ಇದ್ದ ಕಾರಣ ಸ್ಥಳದಲ್ಲಿ ನಿಂತಿದ್ದ ವ್ಯಕ್ತಿಯ ಮತ್ತು ಆತನ ಮುಖವು ಕಾಣುತ್ತಿರಲಿಲ್ಲ ಎಂದರೆ ಸಾಕ್ಷಿಯು ಬೀದಿ ದೀಪ ಇದ್ದ ಕಾರಣ ಸದರಿ ದೀಪದ ಬೆಳಕಿನಲ್ಲಿ 40-50 ಅಡಿ ಅಂತರಲ್ಲಿ ನಿಂತಿದ್ದ ನನಗೆ ವ್ಯಕ್ತಿ ಹಾಗೂ ಆತನ ಮುಖ ಸ್ಪಷ್ಟವಾಗಿ ಕಾಣುತ್ತಿತ್ತು ಎಂದು ನುಡಿಯುತ್ತಾರೆ.

ವ್ಯಕ್ತಿಯು ಮುದ್ದೆಮಾಲನ್ನು ವಾಹನದ ಒಳಗಿನಿಂದ ತೆಗೆದು ಮಾರಾಟ ಮಾಡುತ್ತಿದ್ದ ಎಂಬ ವಿಷಯ ಸುಳ್ಳು ಎಂದರೆ ಸರಿಯಲ್ಲ. ಸ್ಥಳದಿಂದ ಓಡಿ ಹೋದ ವ್ಯಕ್ತಿಗಳನ್ನು ಹಿಡಿಯಲು ಪ್ರಯತ್ನ ಮಾಡಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಗಳನ್ನು ಕತ್ತಲು ಆಗಿದ್ದ ಕಾರಣ ಅಥವಾ ದೂರ ಇದ್ದ ಕಾರಣ ನೀವು ಹಿಡಿಯಲಿಲ್ಲ ಎಂದರೆ ಸಾಕ್ಷಿಯು ಆರೋಪಿ ಮತ್ತು ಮಾಲು ಇದ್ದ ಕಾರಣ ಸದರಿ ವ್ಯಕ್ತಿಗಳನ್ನು ಹಿಡಿಯಲು ಯತ್ನಿಸಿಲ್ಲ ಎಂದು ನುಡಿಯುತ್ತಾರೆ.

ಮುದ್ದೆಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನೀಡಿದ ಮುದ್ದೆಮಾಲಗಳ ವಿವರಗಳು ಸತ್ಯವಿಲ್ಲ ಎಂದರೆ ಸರಿಯಲ್ಲ. ಸಾರಾಯಿ ಮತ್ತು ಅಬಕಾರಿ ವಸ್ತುಗಳ ಬಗ್ಗೆ ನಿಮಗೆ ತರಬೇತಿ ಆಗಿದೆಯೇ ಎಂದರೆ ಸಾಕ್ಷಿಯು ಅಬಕಾರಿ ಕಾಯ್ದೆ ಬಗ್ಗೆ ಅಷ್ಟೇ ತರಬೇತಿಯಾಗಿದ್ದು ಸಾರಾಯಿ ಮತ್ತು ಅಬಕಾರಿ ವಸ್ತುಗಳ ಬಗ್ಗೆ ತರಬೇತಿಯಾಗಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸದರಿಯವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯು ಅಮೃತ ವೈನ್ ಯಲ್ಲಾಪುರ ರವರಿಂದ ಮುದ್ದೆಮಾಲನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

ಸಂಗಟಿಕೊಪ್ಪ ಗ್ರಾಮವು ಗಡಿ ಪ್ರದೇಶದಲ್ಲಿ ಇರುವ ಕಾರಣ ಬೀದಿ ದೀಪ, ರಸ್ತೆ ಮತ್ತು ಬಸ್ ನಿಲ್ದಾಣದ ವ್ಯವಸ್ಥೆಗಳು ಇಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಬೀದಿ ದೀಪದಲ್ಲಿ ಗುನ್ನಾ ಸ್ಥಳವನ್ನು ನಾನು ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವ ಊರಿನವರು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ದಾಳಿ

ಮಾಡುವ ಪೂರ್ವದಲ್ಲಿ ಆರೋಪಿಯ ಊರು ತನಗೆ ಗೊತ್ತಿರಲಿಲ್ಲ ಸದರಿಯವರು ಹಿಡಿದು ವಿಚಾರಿಸಿದ ನಂತರ ಸಾಕೀನ ಊರು ಹೆಸರು ತಿಳಿದು ಬಂತು ಎಂದು ನುಡಿಯುತ್ತಾರೆ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಕೋರ್ಟ ಪ್ರಶ್ನೇಃ** ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಮಗೆ ಬಂದಿದ್ದ ಬಾತ್ಮಿಯು ಸಾರಾಯಿ ಎಂದು ಹೇಳಿದ್ದೀರಿ ಮು.ಮಾ1 ಎಂದು ಗುರುತಾದ ವಸ್ತುಗಳಲ್ಲಿ ಸಾರಾಯಿಯನ್ನು ಗುರುತಿಸುವಿರಾ ಎಂದರೆ ಸಾಕ್ಷಿಯು ಮು.ಮಾ1 ಎಂದು ಗುರುತಾದ ವಸ್ತುಗಳಲ್ಲಿ ಯಾವುದೂ ಸಾರಾಯಿ ಅಲ್ಲ ಆದರೆ ಮದ್ಯದ ವಸ್ತುಗಳು ಎಂದು ನುಡಿಯುತ್ತಾರೆ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**